





ಆಗಸ್ಟ್ 2019ರಂದು ಕಲಾಮಂದಿರ ಶತಮಾನೋತ್ಸವ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಲಾ ಶಿಬಿರಗಳು, ಚಿತ್ರಕಲಾ ಪ್ರದರ್ಶನ, ವಿಚಾರ ಸಂಕಿರಣ, ಕಲಾಮಂದಿರ ನಡೆದು ಬಂದ ದಾರಿ ವಸ್ತು ಪ್ರದರ್ಶನ, ಪುಸ್ತಕಗಳ ಬಿಡುಗಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈ ಒಂದು ಐತಿಹಾಸಿಕ ಕಾರ್ಯಕ್ರಮಕ್ಕೆ ತಮ್ಮೆಲ್ಲರ ನೆರವಿನ ಅಗತ್ಯವಿದೆ. ಬನ್ನಿ ಈ ಶತಮಾನೋತ್ಸವ ಸಂಭ್ರಮಕ್ಕೆ ರಂಗು ತನ್ನಿ.





# ಕಲಾಮಂದಿರ

## ಶತಮಾನೋತ್ಸವ

1919-2019

FOUNDER : A N SUBBARAO



## KALAMANDIR SCHOOL OF ARTS

A N SUBBARAO ROAD, 5TH CROSS. 4TH MAIN,
HANUMANTHANAGAR, BENGALURU - 560019
KARNATAKA , INDIA
080-26606861 | 9886330207
kalamandirschool@gmail.com
www.facebook.com/kalamandirschoolofarts

CELEBRATING
CENTENARY

## ಕಲಾಮಂದಿರ ಶತಮಾನೋತ್ಸವ ಸಂಭ್ರಮ



ಚಿತ್ರಕಲೆ, ಶಿಲ್ಪಕಲೆಯನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಳ್ಳುವುದಲ್ಲದೇ ಇದರ ಮೂಲಕ ಉದ್ಯೋಗವನ್ನೂ ಕಂಡುಕೊಳ್ಳಬಹುದೆಂಬ ಪರಿಕಲ್ಪನೆಯನ್ನು ಸ್ವಾತಂತ್ರ್ಯ ಪೂರ್ವದಲ್ಲೆ ಹುಟ್ಟುಹಾಕಿದ್ದು ಕಲಾಮಂದಿರ. ಇದಲ್ಲದೆ ರಂಗಭೂಮಿ, ಸಾಹಿತ್ಯ, ಸಂಗೀತಪ್ರಕಾರಗಳಿಗೂ ಅವಕಾಶ ನೀಡಿ ಅತ್ಯುತ್ತಮ ಕೊಡುಗೆಗಳನ್ನು ನೀಡುತ್ತಾ ಬಂದಿದೆ. ಈ ಸಂಸ್ಥೆಯು ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ಕೇಂದ್ರವೆಂದು ಹೆಸರುವಾಸಿಯಾಗಿದೆ. ಈ ಶತಮಾನೋತ್ಸವ ಅಂಗವಾಗಿ ಕಲೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ವರ್ಷವಿಡೀ ನಡೆಸಲಾಗುತ್ತಿದೆ ಹಾಗೂ ಆಗಸ್ಟ್ 2019ರಲ್ಲಿ ನಡೆಯುವ ಶತಮಾನೋತ್ಸವ ಆಚರಣೆಯ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲು ಸಿದ್ಧತೆ ನಡೆಸಿದೆ.

ಈ ಹಿನ್ನಲೆಯಲ್ಲಿ ಕಲಾ ಮಂದಿರ ಶತಮಾನೋತ್ಸವ ಸಮಿತಿ ರಚನೆಯಾಗಿದೆ.

ಶ್ರೀ. ಚಿರಂಜೀವಿ ಸಿಂಗ್ – ಅಧ್ಯಕ್ಷರು
ಪ್ರೊ.ಅ.ರಾ.ಮಿತ್ರ – ಉಪಾಧ್ಯಕ್ಷರು

ಮಾನ್ಯ ಸದಸ್ಯರು
ಶ್ರೀ. ಹೆಚ್.ಎಸ್.ದೊರೆಸ್ವಾಮಿ, ಡಾ.ರಾಜೀವ್‌ತಾರಾನಾಥ
ಪ್ರೊ.ಎಂ.ಎಚ್.ಕೃಷ್ಣಯ್ಯ, ಶ್ರೀ.ಎಚ್.ಜಿ.ಸೊಮಶೇಖರರಾವ್
ಡಾ.ವಿಜಯಾ, ಶ್ರೀಮತಿ ಕನಕಮೂರ್ತಿ, ಡಾ. ಬಿ.ಕೆ.ಎಸ್. ವರ್ಮ
ಶ್ರೀ. ವೆಂಕಟಾಚಲಪತಿ, ಶ್ರೀ.ಹೆಚ್.ಎನ್.ಸುರೇಶ್
ಸಂಚಾಲಕರು: ಶ್ರೀ. ಎ.ಎಂ.ಪ್ರಕಾಶ್

## ಕಲಾಮಂದಿರ ಸಾಧನೆಗಳು

- 1919: ಅ.ನ.ಸುಬ್ಬರಾಯರಿಂದ ಕರ್ನಾಟಕದ ಮೊಟ್ಟಮೊದಲ ಕಲಾಶಾಲೆ ಕಲಾಮಂದಿರ ಬೆಂಗಳೂರಿನಲ್ಲಿ ಸ್ಥಾಪನೆ.
- ಚಿತ್ರಕಲಾ ಡಿಪ್ಲೋಮಾ ಆರಂಭ. ಪ್ರೇರಣೆ: ಮಹಾತ್ಮ ಗಾಂಧಿ, ಸರ್.ಎಂ.ವಿಶ್ವೇಶ್ವರಯ್ಯ
- ಇದೇ ಸಮಯದಲ್ಲಿ ಬಂಗಾಳದಲ್ಲಿ ರವೀಂದ್ರನಾಥ ಠಾಗೂರ್ ಅವರಿಂದ ಶಾಂತಿನಿಕೇತನ ಕಲಾಶಾಲೆಯ ಆರಂಭ.
- ವಿದ್ಯಾರ್ಥಿಗಳಿಗೆ 'ಓದಿನೊಂದಿಗೆ ದುಡಿಮೆ' ಪರಿಕಲ್ಪನೆಯಡಿಯಲ್ಲಿ – ಕಲಾತ್ಮಕ ವಿನ್ಯಾಸಗಳ Sign Board ರಚನೆಯ ಬಗ್ಗೆ ತರಬೇತಿ
- 1921: ರಾಷ್ಟೀಯ ಚಿತ್ರಕಲಾ, ಕರಕುಶಲೆಗಳ ಪ್ರದರ್ಶನ. ದಿವಾನ್ ಸರ್.ಮಿರ್ಜಾ ಇಸ್ಮಾಯಿಲ್ ಭೇಟಿ. ಸರ್ಕಾರದಿಂದ ಗ್ರಾಂಟ್ ನೀಡಿಕೆ
- 1927: ದ್ವಿತೀಯ ರಾಷ್ಟ್ರೀಯ ಚಿತ್ರಕಲಾ,ಕರಕುಶಲ ಪ್ರದರ್ಶನ. ಉದ್ಘಾಟಕರು: ನೇಪಾಳದ ಮಹಾರಾಜ ಬಹದ್ದೂರ್ ಸಿಂಗ್
- 1929: ತೃತೀಯ ರಾಷ್ಟ್ರೀಯ ಚಿತ್ರಕಲಾ ಪ್ರದರ್ಶನ. ಉದ್ಘಾಟಕರು: ಹೈದರಾಬಾದಿನ ಯುವರಾಣಿ ದುರೇಶಾವಾಲಾ.
- 1934: ಖಾದಿ ವಸ್ತುಗಳ ಪ್ರದರ್ಶನ. ಮಹಾತ್ಮ ಗಾಂಧಿ ಹಾಗೂ ಅನಿಬೆಸೆಂಟ್ ಭೇಟಿ. ಮೆಚ್ಚುಗೆಯ ನುಡಿ.
- 1929–30: ಕಲೆಗೆ ಸಂಬಂಧಿಸಿದ 'ಕಲಾ' ಮಾಸ ಪತ್ರಿಕೆಗಳ ಪ್ರಕಟಣೆ.
- 1945: ದೇಸಿ ಚಿಂತನೆಯ ಫೋಟೊ ಫ್ರೆಂ ಯಂತ್ರ ತಯಾರಿಕೆ. ಸರ್.ಎಂ.ವಿಶ್ವೇಶ್ವರಯ್ಯ ಅವರಿಂದ ಶ್ಲಾಘನೆ.
- 1930: ಚಿತ್ರಕಲಾ ಡಿಪ್ಲೋಮಾದೊಂದಿಗೆ ಛಾಯಾಚಿತ್ರಣದ ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿ. Photo Studio ಆರಂಭ.
- 1945: ಬಾಟಿಕ್ ಕಲೆ ಕುರಿತು ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ. ಕಲಾಸಾಧ್ಯತೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯ
- 1942: ಬೆಂಗಳೂರಿನಲ್ಲಿ ರಾಜ್ಯಮಟ್ಟದ ಪ್ರಪ್ರಥಮ ರಂಗಭೂಮಿ ಸಮ್ಮೇಳನ
- 1973: ಅ.ನ.ಸು ಅವರಿಂದ 'ದೃಗ್ದರ್ಶನ' ಜ್ಯಾಮಿತಿಗೆ ಸಂಬಂಧಿಸಿದ ಅತ್ಯಮೂಲ್ಯ ಪುಸ್ತಕ ಪ್ರಕಟಣೆ
- 1969: ಕಲಾಮಂದಿರದ ಸುವರ್ಣಮಹೋತ್ಸವ ಆಚರಣೆ
- 1991: ಅ.ನ.ಸು ಜನ್ಮಶತಮನೋತ್ಸವ ಆಚರಣೆ
- 1994: ಕಲಾಮಂದಿರ ವಜ್ರಮಹೋತ್ಸವ ಆಚರಣೆ
- 1985: ಹನುಮಂತನಗರದಲ್ಲಿ ಕಲಾಮಂದಿರದ ಸ್ವಂತ ಕಟ್ಟಡದ ಪ್ರಾರಂಭೋತ್ಸವ
- 2006: ಕಲಾಮಂದಿರದಲ್ಲಿ ಚಿತ್ರಕಲಾ ಪದವಿ ಶಿಕ್ಷಣ (ಬಿ.ವಿ.ಎ) ಆರಂಭ
- 2019: ಚಿತ್ರಕಲಾ ಪದವಿಯೊಂದಿಗೆ ಡಿಜಿಟಲ್ ಆರ್ಟ್ ತರಬೇತಿ ಶಿಕ್ಷಣ